# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1352 |
| 2) ಸದಸ್ಯರ ಹೆಸರು | : ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) |
| 3) ಉತ್ತರಿಸುವ ದಿನಾಂಕ | : 18-03-2020 |
| 4) ಉತ್ತರಿಸಬೇಕಾದ ಸಚಿವರು | : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು 2019-20 ರಲ್ಲಿ ಗಳಿಸಿದ ಲಾಭವೆಷ್ಟು; (ವಿವರ ನೀಡುವುದು) | ನಿಗಮವು 2019-20ನೇ ಸಾಲಿನ ದಿನಾಂಕ: 30-09-2019ರ ಅಂತ್ಯಕ್ಕೆ ರೂ.74.77 ಲಕ್ಷ ನಿವ್ವಳ ಲಾಭಗಳಿಸಿದ್ದು, ಒಟ್ಟಾರೆ ಸಂಚಿತ ಲಾಭಾಂಶವು ರೂ.11.48 ಕೋಟಿಯಾಗಿರುತ್ತದೆ. |
| ಆ) | ಕೆ.ಎಫ್.ಡಿ.ಸಿ. ಯಿಂದ ನಡೆಸಲ್ಪಡುವ ಮೀನು ಊಟದ ಹೋಟೆಲ್ ಬೆಂಗಳೂರು ಶಾಖೆಯು ಲಾಭದಲ್ಲಿದೆಯೇ; ದಿನವೊಂದಕ್ಕೆ ನಡೆಸುವ ವ್ಯವಹಾರ ಎಷ್ಟು; ಇಂತಹ ಹೋಟೆಲ್ ಗಳನ್ನು ರಾಜ್ಯದ ಎಷ್ಟು ಕಡೆಗಳಲ್ಲಿ ಪ್ರಾರಂಭಿಸಲು ಸರಕಾರದ ಮುಂದೆ ಯೋಜನೆಗಳಿವೆ; (ವಿವರ ನೀಡುವುದು) | ಬೆಂಗಳೂರಿನ ಕಬ್ಬನ್‌ಪಾರ್ಕಿನಲ್ಲಿ ನಿಗಮದ ಮತ್ಸ್ಯದರ್ಶಿನಿ ಮಳಿಗೆಯು ಲಾಭದಲ್ಲಿರುತ್ತದೆ. 2019-20ನೇ ಸಾಲಿನಲ್ಲಿ ದಿನಾಂಕ 01-04-2019 ರಿಂದ 30-09-2019 ರವರೆಗೆ ಒಟ್ಟು ರೂ.33.62 ಲಕ್ಷ ಲಾಭಗಳಿಸಿರುತ್ತದೆ. ದಿನವೊಂದಕ್ಕೆ ಸದ್ರಿ ಮಳಿಗೆಯಲ್ಲಿ ಸರಾಸರಿ ರೂ.1.70 ಲಕ್ಷ ವ್ಯವಹಾರ ನಡೆಯುತ್ತದೆ.<br><br>ರಾಜ್ಯದಲ್ಲಿ ನಬಾರ್ಡ್ ಸಹಯೋಗದೊಂದಿಗೆ ಆರ್.ಐ.ಡಿ.ಎಫ್. ಯೋಜನೆಯಡಿ ಒಟ್ಟು ರೂ.15.00 ಕೋಟಿ ವೆಚ್ಚದಲ್ಲಿ 12 ಮತ್ಸ್ಯದರ್ಶಿನಿ ಮಳಿಗೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದ್ದು, ಮಂಜೂರಾತಿ ದೊರೆತನಂತರ ಮಂಗಳೂರು, ಕುಂದಾಪುರ, ಉಡುಪಿ, ಮೈಸೂರು, ಕಲಬುರ್ಗಿ, ಬೆಳಗಾವಿ, ಹಾಸನ, ಹುಬ್ಬಳ್ಳಿ-ಧಾರವಾಡ, ವಿಜಯಪುರ, ತುಮಕೂರು, ಶಿವಮೊಗ್ಗ ಮತ್ತು ರಾಯಚೂರುಗಳಲ್ಲಿ ನಿಗಮದಿಂದ ಮತ್ಸ್ಯದರ್ಶಿನಿ ಮಳಿಗೆಗಳನ್ನುನಿರ್ಮಿಸಲಾಗುವುದು. |
| ಇ) | ಹಸಿ ಮೀನು ಮಾರಾಟ ಮಳಿಗೆಗಳು ಲಾಭದಲ್ಲಿವೆಯೇ; ವಾರ್ಷಿಕವಾಗಿ ಎಷ್ಟು ಲಾಭಗಳಿಸುತ್ತದೆ; (ವಿವರ ನೀಡುವುದು) | ನಿಗಮವು ತುಮಕೂರು, ಹಾಸನ, ಮಂಗಳೂರಿನ ಚಿಲಿಂಬಿ, ಮಡಿಕೇರಿ, ಶಿವಮೊಗ್ಗ, ಮೈಸೂರು ಮತ್ತು ಕೋಲಾರದಲ್ಲಿ ಹಸಿ ಮೀನು ಮಾರಾಟ ಮಳಿಗೆಯನ್ನು ನಡೆಸುತ್ತಾ ಬಂದಿರುತ್ತದೆ. ಸದ್ರಿ ಮಳಿಗೆಗಳ ಲಾಭ-ನಷ್ಟ ಗಳ ವಿವರಗಳು ಈ ಕೆಳಗಿನಂತಿದೆ. |

| ಮೀನು ಮಾರಾಟ ಮಳಿಗೆ | 2018-19ನೇ ಸಾಲಿನ ದಿನಾಂಕ: 31.3.2019ರ ಅಂತ್ಯಕ್ಕೆ ನಿವ್ವಳ ಲಾಭ/ನಷ್ಟ (+/-) (ರೂ. ಲಕ್ಷಗಳಲ್ಲಿ) |
|---|---|
| ತುಮಕೂರು | (+) 5.17 |
| ಹಾಸನ | (+) 1.47 |
| ಚಿಲಿಂಬಿ, ಮಂಗಳೂರು | (-) 1.05 |
| ಮಡಿಕೇರಿ | (-) 7.33 |
| ಶಿವಮೊಗ್ಗ (3 ಮಳಿಗೆಗಳು) | (-) 4.96 |
| ಮೈಸೂರು | (-) 5.72 |
| ಕೋಲಾರ | (-) 1.04 |

ನಿಗಮದ ಚಿಲಿಂಬಿ ಮಂಗಳೂರು, ಮಡಿಕೇರಿ, ಶಿವಮೊಗ್ಗ ಮತ್ತು ಮೈಸೂರು ಮಳಿಗೆಗಳು ಖಾಸಗಿಯವರ ಪೈಪೋಟಿಯಿಂದಾಗಿ ನಷ್ಟವುಂಟಾಗಿದ್ದು, ಪ್ರಸ್ತುತ ಸಾಲಿನಲ್ಲಿ ಸದ್ರಿ ಮಳಿಗೆಗಳನ್ನು ಲಾಭದಲ್ಲಿ ನಡೆಸಲು ಕ್ರಮವಹಿಸಲಾಗಿದೆ.

ಇದಲ್ಲದೆ, ನಿಗಮವು ಬೆಂಗಳೂರಿನ ಯಲಹಂಕ, ಸಿದ್ದಲಿಂಗಪುರ ಮೈಸೂರು, ಸುಳ್ಯ ಮತ್ತು ಪುತ್ತೂರು ಇಲ್ಲಿ ಮಳಿಗೆಗಳನ್ನು ಹೊಂದಿದ್ದು, ಸದ್ರಿ ಮಳಿಗೆಗಳನ್ನು ಖಾಸಗಿಯವರಿಗೆ ಲೈಸೆನ್ಸ್ ಮೇಲೆ ನಡೆಸಲು ನೀಡಲಾಗಿದೆ.

ಈ) ಕೆ.ಎಫ್.ಡಿ.ಸಿ. ಯಲ್ಲಿ ಪ್ರಸ್ತುತ ಎಷ್ಟು ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ; ಖಾಯಂ, ದಿನಗೂಲಿ ಮತ್ತು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು? (ವಿವರ ನೀಡುವುದು)

ನಿಗಮದಲ್ಲಿ ಒಟ್ಟು 262 ಮಂಜೂರಾದ ಹುದ್ದೆಗಳಿದ್ದು, ಇದರಲ್ಲಿ 87 ಮಂದಿ ಖಾಯಂ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೆ, ಗುತ್ತಿಗೆ ಆಧಾರದಲ್ಲಿ ಒಟ್ಟು 145 ಮಂದಿ ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ವಿವರಗಳು ಈ ಕೆಳಗಿನಂತಿದೆ:-

**ಖಾಯಂ ನೌಕರರು**

| ಕ್ರ. ಸಂ. | ವರ್ಗ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|
| 1) | ಎ | 7 | 2 | 5 |
| 2) | ಬಿ | 16 | 7 | 9 |
| 3) | ಸಿ | 198 | 58 | 140 |
| 4) | ಡಿ | 41 | 20 | 21 |
| | ಒಟ್ಟು | 262 | 87 | 175 |

**ಹೊರಗುತ್ತಿಗೆ ನೌಕರರು**

| ಕ್ರ. ಸಂ. | ವರ್ಗ | ಕರ್ತವ್ಯ ನಿರ್ವಹಿಸುತ್ತಿರುವ ನೌಕರರು |
|---|---|---|
| 1) | ಎ | 1 |
| 2) | ಬಿ | - |
| 3) | ಸಿ | 85 |
| 4) | ಡಿ | 59 |
| | ಒಟ್ಟು | 145 |

ಸಂಖ್ಯೆ: ಪಸಂಮೀ ಇ-78 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು